ಶ್ರೇಣಿಯನ್ನು ಮಂಜೂರು ಮಾಡಿರುವುದರಿಂದ ನಿಯಮಾನುಸಾರ ಸದರಿ ಯವರನ್ನು ಪದವಿ ವಿಭಾಗದಲ್ಲಿ ಲಭ್ಯವಿದ್ದ ಕಾರ್ಯಭಾರಕ್ಕೆ ಮರು ಹಂಚಿಕೆ ಗೊಳಿಸಲಾಗಿದೆ. ಆದ್ದರಿಂದ ಪದವಿ ವಿಭಾಗದಲ್ಲಿ ಉಳಿಕೆ ಕಾರ್ಯಭಾರ ಇರುವುದಿಲ್ಲ. ಸದರಿ ವಿಷಯದಲ್ಲಿ ಮುಂದೆ ಕಾರ್ಯಭಾರ ಉಂಟಾದಾಗ ಆಯ್ಕೆಯಾದ ಅಭ್ಯರ್ಥಿಯ ನೇಮಕಾತಿಯನ್ನು ಅನುಮೋದಿಸಲಾಗುವುದು. ಸರ್ಕಾರದ ಪಾಲಿಸಿ ನಿಯಮಗಳ ಪ್ರಕಾರ ಮರು ಹಂಚಿಕೆ ಮಾಡಿರುವು ದರಿಂದ ಮತ್ತು ಪ.ಜಾ ಮೀಸಲಾತಿ ಹುದ್ದೆಗೆ ಎದುರಾಗಿ ಮರು ಹಂಚಿಕೆ ಮಾಡಿರುವುದಿಲ್ಲವಾದ್ದರಿಂದ ಮೀಸಲಾತಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದಿಲ್ಲ.

ಇ) ಶ್ರೀಮತಿ ಕೆ.ಅನಿತ ಇವರು ಸಂಯುಕ್ತ ಪದವಿ ಕಾಲೇಜಿನಲ್ಲಿ ಸ್ಟಾಪ್‌ಗ್ಯಾಪ್ ಉಪನ್ಯಾಸಕರಾಗಿ ನೇಮಕ ಹೊಂದಿದ್ದು ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಖಾಯಂಗೊಳಿಸಲಾಗಿತ್ತು. ಪದವಿ ಊರ್ವ ವಿಭಾಗದಲ್ಲಿ ಬೋಧಿಸುತ್ತಿದ್ದ ಇವರಿಗೆ ಸರ್ಕಾರವು ಯುಜಿಸಿ ವೇತನ ಶ್ರೇಣಿ ಮಂಜೂರು ಮಾಡಿರುವುದರಿಂದ ಸದರಿಯವರನ್ನು ಸರ್ಕಾರದ ನಿಯಮಗಳ ಪ್ರಕಾರ ಪದವಿಗೆ ಮರು ಹಂಚಿಕೆಗೊಳಿಸಲಾಗಿದೆಯೇ ಹೊರತು ಯಾವುದೇ ಷಡ್ಯಂತ್ರ ನಡೆಸಿರುವುದಿಲ್ಲ.

ಮೇಲ್ಕಂಡ ಕಾಲೇಜಿನಲ್ಲಿ ಸಮಾಜಶಾಸ್ತ್ರದ 03 ಮಂಜೂರಾದ ಉಪನ್ಯಾಸಕರ ಹುದ್ದೆಗಳಿದ್ದು 01 ಸಾಮಾನ್ಯ ವರ್ಗದ ಮೀಸಲಾತಿ ಹುದ್ದೆಗೆ ಎದುರಾಗಿ ಶ್ರೀಮತಿ ಕೆ. ಅನಿತ ಅವರನ್ನು ಮರು ಹಂಚಿಕೆಗೊಳಿಸಲಾಗಿದ್ದು. ಪ.ಜಾ. ಮೀಸಲಾತಿ ಹುದ್ದೆಗೆ ಎದುರಾಗಿ ಮರು ಹಂಚಿಕೆ ಮಾಡಿರುವುದಿಲ್ಲ. ಆದ್ದರಿಂದ ಪ.ಜಾ ಅಭ್ಯರ್ಥಿಗೆ ಮೀಸಲಾಗಿರುವ 01 ಹುದ್ದೆಗೆ ಖಾಲಿ ಇರುತ್ತದೆ. ಆದ್ದರಿಂದ ಪ.ಜಾ ಅಭ್ಯರ್ಥಿಗೆ ಅನ್ಯಾಯ ಮಾಡುವ ಉದ್ದೇಶ ಇರುವುದಿಲ್ಲ.

ಈ) ನಿಯಮಗಳ ಉಲ್ಲಂಘನೆ ಆಗಿಲ್ಲದೆ ಇರುವುದರಿಂದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಿಕ್ಷಕರನ್ನು ಸಿ.ಇ.ಟಿ. ಮೂಲಕ ನೇಮಕಾತಿ

770 (1322) ಶ್ರೀ ಕುಮಾರಸ್ವಾಮಿ ಎಂ.ಪಿ (ಮೂಡಿಗೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಸಿ.ಇ.ಟಿ., ಮೂಲಕ ನಡೆಯುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಪ್ರಕ್ರಿಯೆ ನಡೆಯದೆ ಇರಲು ಕಾರಣವೇನು;

ಇ) ಸದರಿ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದಿಲ್ಲವೇ; ಒಂದು ವೇಳೆ ಖಾಲಿ ಇದ್ದ ಪಕ್ಷದಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು. 2001–02 ನೇ ಸಾಲಿನಿಂದ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಸಿ.ಇ.ಟಿ. ಮೂಲಕ ನಡೆಯುತ್ತಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿ ಸಾಲಿನಲ್ಲಿಯೂ ಸಿ.ಇ.ಟಿ., ಪರೀಕ್ಷೆ ಮೂಲಕ ಶಿಕ್ಷಕರನ್ನು ನೇಮಕ ಮಾಡಲಾಗಿದೆ, ಆದರೆ 2009–10 ನೇ ಸಾಲಿನಲ್ಲಿ ಶಿಕ್ಷಕರ ನೇಮಕಾತಿ ನಡೆಯದೆ ಇರಲು ಕಾರಣವೇನೆಂದರೆ, ಈ ಜಿಲ್ಲೆಯ ಮಕ್ಕಳ ಶಿಕ್ಷಕರ ಅನುಪಾತ 18 ಆಗಿದ್ದು, ರಾಜ್ಯದ ಸರಾಸರಿ ಅನುಪಾತವಾದ 1:28 ಕ್ಕಿಂತ ಕಡಿಮೆಯಿದೆ. ಜಿಲ್ಲೆಯಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮಕ್ಕಳ ಶಿಕ್ಷಕರ ಅನುಪಾತದಂತೆ ಸರಿದೂಗಿಸುವ ಸಲುವಾಗಿ ನೇಮಕಾತಿ ನಡೆದಿರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಜನಸಂಖ್ಯೆಯ ಬೆಳವಣಿಗೆ ದರ 2001 ರಿಂದ 2010 ರ ದಶಕದಲ್ಲಿ ಕಡಿಮೆಯಾಗುತ್ತಿದ್ದು, 2001 ರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದು, ಮಕ್ಕಳ ಶಿಕ್ಷಕರ ಅನುಪಾತಕ್ಕನುಗುಣವಾಗಿ ಕೆಲವು ಶಾಲೆಗಳಲ್ಲಿ ಶಿಕ್ಷಕರು ಹೆಚ್ಚುವರಿಯಾಗಿರುತ್ತಾರೆ.

ರಾಜ್ಯದಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಲು ಈ ಕೆಳಕಾಣಿಸಿದಂತೆ ಮಕ್ಕಳ ಶಿಕ್ಷಕರ ಅನುಪಾತವನ್ನು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರತ್ಯೇಕವಾಗಿ ನಿಗದಿಪಡಿಸಲಾಗಿದೆ.

ಕಿರಿಯ ಪ್ರಾಥಮಿಕ ಶಾಲೆ

1–20	1
21–60	2
61–90	3
91–120	4
121–200	5
201–240	6

1 ರಿಂದ 7ನೇ ತರಗತಿ ಶಾಲೆಗಳಿಗೆ

1–40	2
41–90	3
91–120	4
121–150	5
151–180	6
181–220	7
221–320	8

320 ರಿಂದ ಮೇಲ್ಪಟ್ಟು, ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳಲ್ಲಿ 1:40 ರ ಅನುಪಾತದಲ್ಲಿ ಶಿಕ್ಷಕರನ್ನು ಹೆಚ್ಚುವರಿ ಲೆಕ್ಕ ಮಾಡಲಾಗುವುದು.

ಇ) ಈ ಜಿಲ್ಲೆಯಲ್ಲಿ ಪ್ರಸ್ತುತ 220 ಕನ್ನಡ ಸಹ ಶಿಕ್ಷಕ, 11 ಉರ್ದು, 3 ತಮಿಳು, 23 ದೈಹಿಕ, 3 ಚಿತ್ರಕಲೆ, 3 ಸಂಗೀತ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಕಲಿಕೆಯ ಗುಣಮಟ್ಟ ಸುಧಾರಿಸುವ ಕಾರಣದಿಂದ ಮಕ್ಕಳ ಶಿಕ್ಷಕರ ಅನುಪಾತ ರಾಜ್ಯದ ಸರಾಸರಿ ಅನುಪಾತಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗನ್ನು ಹೊಸ ನೇಮಕಾತಿ ಮೂಲಕ ಭರ್ತಿ ಮಾಡುವ ಬದಲು ಘಟಕದೊಳಗಿನ ಹೆಚ್ಚುವರಿ ಶಿಕ್ಷಕರನ್ನು ಮಕ್ಕಳ ಸಂಖ್ಯೆ ಹೆಚ್ಚಿಗೆ ಇರುವ

ಅಥವಾ ಶಿಕ್ಷಕರ ಹುದ್ದೆ ಖಾಲಿ ಇರುವ ಶಾಲೆಗಳಿಗೆ ಸ್ಥಳಾಂತರಿಸಿ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ.

ಪದವಿ ಕಾಲೇಜುಗಳ ಕಟ್ಟಡ ನಿರ್ಮಾಣ

770 (1362) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹೆತ್ತೂರು ಮತ್ತು ಆಲೂರು ತಾಲ್ಲೂಕುಗಳಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸ್ವಂತ ಕಟ್ಟಡಗಳು ಇದೆಯೇ?

ಆ) ಇಲ್ಲದಿದ್ದಲ್ಲಿ ಈ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಸಕಲೇಶಪುರ ತಾಲ್ಲೂಕಿನ ಹೆತ್ತೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿರುವುದಿಲ್ಲ.

ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮೂರು ಕೊಠಡಿಗಳುಳ್ಳ ಸ್ವಂತ ಕಟ್ಟಡವನ್ನು ನಿರ್ಮಿಸಲಾಗಿರುತ್ತದೆ.

ಆ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಮುಂದಿನ ವರ್ಷಗಳಲ್ಲಿ ಆಲೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹೆಚ್ಚುವರಿ ಕೊಠಡಿಗಳನ್ನು ಒದಗಿಸಲಾಗುವುದು.

ಹೆತ್ತೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನಿವೇಶನ ವಿಳಂಬವಾಗಿ ದೊರೆತಿದ್ದರಿಂದ, 2009–10ನೇ ಸಾಲಿನಲ್ಲಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ.

ಮುಂದಿನ ಸಾಲುಗಳಲ್ಲಿ ಅನುದಾನವನ್ನು ಒದಗಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.